## ಅ.ಭಾ.84 ನೇ ಕನ್ನಡ ಸಾಹಿತ್ಯ ಸಮ್ಮೇಳನ
## ಹಣ ವಸೂಲಿ ಮಾಡುವವರ ವಿರುದ್ಧ ದೂರು ನೀಡಲು ಜಿಲ್ಲಾಧಿಕಾರಿ ಸೂಚನೆ

**ಧಾರವಾಡ( ಕರ್ನಾಟಕ ವಾರ್ತೆ) ಡಿ.25;** ಬರುವ ಜನವರಿ 4,5 ಹಾಗೂ 6 ರಂದು ಧಾರವಾಡದಲ್ಲಿ ನಡೆಯಲಿರುವ ಅಖಿಲ ಭಾರತ 84 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಹೆಸರಿನಲ್ಲಿ ಕೆಲವು ಕನ್ನಡಪರ ಸಂಘ-ಸಂಸ್ಥೆಗಳು ಹಣ ವಸೂಲಿ ಮಾಡುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿರುತ್ತದೆ. ಜಿಲ್ಲಾಡಳಿತ ಅಥವಾ ಸಮ್ಮೇಳನ ಸಮಿತಿಯಿಂದ ದೇಣಿಗೆ ಸಂಗ್ರಹಿಸಲು ಯಾವುದೇ ಸಂಘ-ಸಂಸ್ಥೆ, ವ್ಯಕಿಗಳಿಗೆ ಅನುಮತಿ ನೀಡಿರುವದಿಲ್ಲ. ಇಂತಹ ಸಂಘ-ಸಂಸ್ಥೆ, ವ್ಯಕ್ತಿಗಳಿಗೆ ದೇಣಿಗೆ ನೀಡದೇ ಇರಲು ಸಾರ್ವಜನಿಕರಿಗೆ ಕೋರಿದೆ. ಆದಾಗ್ಯೂ ಕೆಲವು ಸಂಘ-ಸಂಸ್ಥೆಗಳು ಅಥವಾ ವ್ಯಕ್ತಿಗಳು ದೇಣಿಗೆ ನೀಡಲು ಒತ್ತಾಯಿಸಿದರೆ ಅಂತಹವರ ಬಗ್ಗೆ ಜಿಲ್ಲಾಡಳಿತ ಮತ್ತು ಪೊಲೀಸ ಇಲಾಖೆಗೆ ದೂರು ನೀಡಬಹುದು.ಸ್ವಯಂ ಪ್ರೇರಿತರಾಗಿ ದೇಣಿಗೆ, ಪ್ರಾಯೋಜಕತ್ವ ಮಾಡಲಿಚ್ಛಿಸುವವರು ಡಿಡಿ ಅಥವಾ ಚೆಕ್ ಮೂಲಕ ತಮ್ಮ ಕಚೇರಿಗೆ ಅಥವಾ ನಿರ್ದಿಷ್ಟ ಖಾತೆಗೆ ಜಮೆ ಮಾಡಬಹುದು ಎಂದು ಜಿಲ್ಲಾಧಿಕಾರಿ ದೀಪಾ ಚೋಳನ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.